ಸಮೇತ ಅಪರಾಧಿಗಳು ಸಿಕ್ಕಿಬಿದ್ದಿದ್ದಾರೆ. ಕೋರ್ಟಿನಲ್ಲಿ ಕೇಸು ನಡೆದರೂ ಅವರನ್ನು ಜಾಮೀನು ಕೊಟ್ಟು ಬಿಡಿಸಿಕೊಂಡು ಬಂದಿದ್ದಾರೆ. ಇದರ ಹಿಂದೆ ರಾಜಕೀಯ ಕೈವಾಡ ಇದೆ. ಇದನ್ನು ಪತ್ತೆ ಹಚ್ಚಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಹಣ ಸೋರಿಹೋಗುತ್ತದೆ. ತಾವು ದಯವಿಟ್ಟು ಇದರ ಬಗ್ಗೆ ಸರ್ಕಾರಕ್ಕೆ ತಿಳಿಸಬೇಕು.

ಉಪಾಧ್ಯಕ್ಷರು.—ಮಾನ್ಯ ಪಂಪಾಪತಿಯವರೇ, ನಿಮ್ಮ ಗಮನ ಸೆಳೆಯುವ ಸೂಚನೆ ತಿರಸ್ಕೃತ ವಾಗಿದೆ.

ಶ್ರೀ ಪಂಪಾಪತಿ.—ತಾವು ಇದನ್ನು ಚರ್ಚೆಗೆ ತೆಗೆದುಕೊಂಡರೆ ರಾಜ್ಯಕ್ಕೆ ಆಗುವಂತಹ ಅನ್ಯಾಯ ವನ್ನು ನಿವಾರಣೆ ಮಾಡಿದಂತೆ ಆಗುತ್ತದೆ. ನಾಳೆ ಅವಕಾಶ ಕೊಡುತ್ತೀರಾ ಸ್ವಾಮಿ ?

ಉಪಾಧ್ಯಕ್ಷರು.—ತಾವು ನನ್ನ ಚೇಂಬರ್‌ಗೆ ಬನ್ನಿ, ಮಾತನಾಡೋಣ.

ಶ್ರೀ ಎಂ. ಪುಟ್ಟಸ್ವಾಮಿ ಗೌಡ.—ನಾನು ೧೫ನೇ ತಾರೀಖಿನ ದಿವಸ ಗಮನ ಸೆಳೆಯುವ ಸೂಚನೆ ಯನ್ನು ಕಳಿಸಿಕೊಟ್ಟಿದ್ದೇನೆ. ಅದು ಏನಾಗಿದೆ ಎಂದು ವಿಚಾರ ಮಾಡಿದರೆ ಅಂಗೀಕಾರವಾಗಿದೆ ಎಂದು ಟಪಾಲಿನಲ್ಲಿ ಇದೆ. ಆದರೆ ನನಗೆ ಅದು ಬ್ಯಾಲೆಟ್‌ನಲ್ಲಿ ಬಂದಿಲ್ಲವೆಂದು ಹೇಳಿದ್ದೀರಿ. ಕೃಷ್ಣರಾಜಪೇಟೆ ಭಾಗದ ಬೇಸಿಗೆ ಬೆಳೆಯನ್ನು ಸರ್ಕಾರದವರು ರಕ್ಷಣೆ ಮಾಡಬೇಕು. ಇದರ ತೀವ್ರತೆಯನ್ನು ಅರ್ಥ ಮಾಡಿಕೊಂಡು ತಾವು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇದು ರೈತರ ಅನ್ನದ ಪ್ರಶ್ನೆಯಾಗಿದೆ.

ಉಪಾಧ್ಯಕ್ಷರು.—೫೧ನೇ ತಾರೀಖಿನ ದಿವಸ ಸಮಗ್ರವಾಗಿ ಕ್ಷಾಮ ನಿವಾರಣೆ ವಿಚಾರದ ಬಗ್ಗೆ ಚರ್ಚೆ ಇಟ್ಟುಕೊಂಡಿದ್ದೇವೆ. ಆಗ ನೀವು ಮಾತನಾಡಬಹುದು.

ಪ್ರಕಟಣೆ

ಈಗ ವಿಧಾನ ಪರಿಷತ್ತಿನ ಛೇರ್ಮನ್‌ರವರಿಂದ ಒಂದು ಪತ್ರ ಬಂದಿದೆ ಅದನ್ನು ಓದುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ನಾನು ಗಮನ ಸೆಳೆಯುವ ಸೂಚನೆಯೊಂದನ್ನು ಕಳುಹಿಸಿದ್ದೆ. ಅದರ ಬಗ್ಗೆ ನಾಳೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಉಪಾಧ್ಯಕ್ಷರು.—ತಾವು ಹೇಳಿದ ತಕ್ಷಣ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲ. ಅದನ್ನು ಪರೀಕ್ಷೆ ಮಾಡುತ್ತೇನೆ. ದಯವಿಟ್ಟು ಕಂಗೆಡಬೇಡಿ. It is like section 151 in Civil Procedure Code. I will examine and fix a date. You must go according to the rules framed by you only. It is very clear. First I will make an announcement.

> "As required by rule 114 of Rules of Procedure and Conduct of Business in the Karnataka Legislative Council I send herewith the following Bills which have been agreed to by the Legislative Council on 29th March 1983, without amendments.
>
> 1) The Karnataka Appropriation Bill, 1983.
>
> 2) The Karnataka Appropriation Vote on Account Bill, 1983.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಿಯಮಾವಳಿ ೫೫ನ್ನು ಬಿಟ್ಟು ಮುಂದೆ ಬರುವುದಕ್ಕಾಗುವುದೇ ಇಲ್ಲ. ಈಗಾಗಲೇ ನಾನು ಮತ್ತು ನಮ್ಮ ಅನೇಕ ಜನ ಮಾನ್ಯ ಸದಸ್ಯರುಗಳು ಈ ನಿಯಮಾವಳಿ ಪ್ರಕಾರವೇ ನಾಲ್ಕೈದು ವಿಚಾರಗಳನ್ನು ಕಳುಹಿಸಿದ್ದೇವೆ, ಆ ವಿಚಾರಗಳನ್ನು

ಕಳುಹಿಸಿದ ಮೇಲೆ ತಮ್ಮನ್ನು ಕೇಳಿದ್ದೇನೆ. ಮುಂದಿನ ಕಾರ್ಯಕಲಾಪಗಳಲ್ಲಿ ಅದನ್ನು ತರೋಣ ಎಂದು ತಾವು ಹೇಳಿದ್ದೀರಿ. ಕೆಲವು ವಿಚಾರಗಳನ್ನು ಮುಂದಿನ ಕಾರ್ಯಕಲಾಪಗಳಲ್ಲಿ ತರೋಣ ಅಂತ ಹೇಳಿದ ಮೇಲೆ ನಾವು ಇದುವರೆವಿಗೂ ಕಾದೆವು. ಮಧ್ಯೆ ಮಧ್ಯೆ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಸೋಮವಾರ, ಮಂಗಳವಾರ, ಬುಧವಾರ, ಈ ಮೂರು ದಿನಗಳೂ ಕಳೆದು ಹೋಗಿದೆ. ಬಿಜಾಪುರದಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಮಾಡಿರುವ ವಿಚಾರದ ಬಗ್ಗೆಯೂ ಕಳುಹಿಸಿದ್ದೇನೆ. ತೀರ್ಥಹಳ್ಳಿಯಲ್ಲಿ ಗರ್ಭಿಣಿ ಹೆಣ್ಣುಮಗಳ ಮೇಲೆ ಆ ಆಸ್ಪತ್ರೆಯ ವೈದ್ಯರು ಮಾಡಿರತಕ್ಕಂತಹ ಅತ್ಯಾಚಾರದ ವಿಚಾರವನ್ನು ಏನು ಸ್ವಾಮಿರಾವ್‌ರವರು ಎತ್ತಿದ್ದಾರೆ. ಅದು ಬಹಳ ಮುಖ್ಯವಾದುದು.

ಉಪಾಧ್ಯಕ್ಷರು.—ಇದರ ಬಗ್ಗೆ ಬಂದಂತಹ ವರದಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಟ್ಟಿದ್ದೇವೆ. ನಂತರ ನನ್ನ ಕೊಠಡಿಗೆ ಬನ್ನಿ, ಆ ವರದಿಯನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಮುಂದೆ ಅದನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮುಂದೆ ಅಂದರೆ ಯಾವಾಗ ? ನಾಳೆ ಸದನ ಕೊನೆಗೊಳ್ಳುತ್ತಿದೆ.

ಉಪಾಧ್ಯಕ್ಷರು.—ಎಲ್ಲ ಪ್ರಶ್ನೆಗಳನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇರುವಂತಹ ಹೊಸ ನಿಯಮಾವಳಿ ಪ್ರಕಾರ ಬ್ಯಾಲೆಟ್‌ನಲ್ಲಿ ಬಂದವುಗಳನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಬ್ಯಾಲೆಟ್‌ನಲ್ಲಿ ಬಾರದಿದ್ದರೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮುಂದಿನ ದಿನದ ಬ್ಯಾಲೆಟ್‌ನಲ್ಲಿ ಬಂದರೂ ತೆಗೆದುಕೊಳ್ಳುತ್ತೇವೆ. ಈ ಪ್ರಶ್ನೆ ಬ್ಯಾಲೆಟ್‌ನಲ್ಲಿ ಬರಲಿಲ್ಲ. ಮತ್ತೆ ೪-೫ ದಿವಸಗಳು ಕಳೆದ ಮೇಲೆ ಉಳಿದಂತಹ ಪ್ರಶ್ನೆಗಳನ್ನು ಬ್ಯಾಲೆಟ್‌ಗೆ ಹಾಕುವುದಿಲ್ಲ. ಇದೇ ವಿಚಾರದಲ್ಲಿ ಬಹಳಷ್ಟು ಚರ್ಚೆಯಾಯಿತು. ೨೨೪ ಜನ ಸದಸ್ಯರು ೩೩೪ನೇ ನಿಯಮದ ಕೆಳಗಡೆ ಪ್ರಶ್ನೆಯನ್ನು ಕಳುಹಿಸಿದರೆ ಎಲ್ಲವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ, ನಂತರ ನನ್ನ ಕೊಠಡಿಗೆ ಬನ್ನಿ ಎಂಬುದಾಗಿ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ. ಪರಿಶೀಲನೆ ಮಾಡಿದ ನಂತರ ಮಂತ್ರಿಗಳಿಂದ ಒಂದು ಹೇಳಿಕೆಯನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಅಭಿಪ್ರಾಯ ಇಷ್ಟೆ. ೩೩೪ನೇ ನಿಯಮಾವಳಿ ಏನಿದೆ ಅದನ್ನು ದುರುಪಯೋಗಪಡಿಸಿಕೊಂಡು ಯಾರೂ ಸುಮ್ಮನೆ ಕೂರುವುದಿಲ್ಲ. ಅದನ್ನು ಒಪ್ಪುತ್ತೀರೆಂದು ನನ್ನ ಭಾವನೆ. ಸಾಮಾನ್ಯವಾಗಿರತಕ್ಕಂತಹ ಸಣ್ಣ ಸಣ್ಣ ವಿಚಾರಗಳನ್ನೂ ಈ ನಿಯಮಾವಳಿಯ ಅಡಿಯಲ್ಲಿ ಕಳುಹಿಸುತ್ತಾ ಹೋಗಿಬಿಟ್ಟರೆ ೩೩೪ರ ಪ್ರಕಾರ ಬರುವುದಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸುಮಾರಾಗಿ ಎಲ್ಲಾ ಸದಸ್ಯರೂ ಆ ರೀತಿ ಕಳುಹಿಸಿಕೊಟ್ಟರೆ ಆಗಬಹುದು. ಮುಖ್ಯವಾದ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಕಳುಹಿಸಿದ್ದೇವೆ. ಈ ವೈದ್ಯರ ವಿಚಾರದಲ್ಲಿ ನಾನು ಬರುವ ಹೊತ್ತಿಗೆ ಮಾನ್ಯ ಸದಸ್ಯರಾದ ಸ್ವಾಮಿರಾವ್‌ರವರು ಮಾತನಾಡುತ್ತಿದ್ದರು.

ಉಪಾಧ್ಯಕ್ಷರು.—ಏತಕ್ಕೋಸ್ಕರ ವಿಚಾರವನ್ನು ಪ್ರಸ್ತಾಪ ಮಾಡಬೇಡಿ ಎಂದು ಹೇಳಿದೆನೆಂದರೆ ; Rule 334 is analogous to rule 377 of Parliamentary procedure. If once raised in the House and if the answer is not given by the concerned Minister once again it cannot be raised and the Minister need not give answer. To safeguard the interest of the Member who has raised that point, I requested Sri Swamy Rao to come to chamber and I will also peruse the report. The scope of rule 337 has now been extended to enable the members to register their points and that there being no obligation on the Government or the Minister concerned to reply to the point raised. the Minister concerned may not even be present in the House at the time the point is raised.

ಶ್ರೀ ಎಸ್. ಬಂಗಾರಪ್ಪ.--ತಾವು ಏನು ಹೇಳಿದರೆಂದು ನನಗೆ ಅರ್ಥವಾಗಲಿಲ್ಲ.

MR. DEPUTY SPEAKER.--If once it is raised the concerned Minister need not be present in the House and if it is raised and answer is not given once again it need not be taken. ಎಂದು ಇದೆ. ಅದಕ್ಕೋಸ್ಕರ ಪರಿಶೀಲನೆ ಮಾಡುತ್ತೇನೆ, ೨ ಗಂಟೆಗೆ ನನ್ನ ಕೊಠಡಿಗೆ ಬನ್ನಿ ಎಂದು ಹೇಳಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ರೂಲ್ ೩೩ಳಿರ ಕೆಳಗಡೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರೋ ಆ ರೀತಿ ತಾವು ಅವರಿಗೆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ನನಗೂ ಅದರಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ—ಏಕೆ ಮಾಡಬಾರದು ? ನಿಯಮಾವಳಿ ಪ್ರಕಾರ ಮಾಡಬೇಕು ಅಂತ ಇದೆ.

ಒಬ್ಬ ಮಾನ್ಯ ಸದಸ್ಯರು.—ನಮಗೂ ಅದರಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಿ ಅಂತ ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಾವೂ ಕೂಡ ಭಾಗವಹಿಸಬಹುದು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.--ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಮುಖವಾದ ವಿಚಾರಗಳನ್ನು ಜರೂರಾದ ವಿಚಾರಗಳನ್ನು ಎತ್ತತಕ್ಕಂಥಾದ್ದು ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥಾದ್ದು ಮಾನ್ಯ ಸದಸ್ಯರ ಹಕ್ಕು. ಆ ಹಕ್ಕನ್ನು ರಕ್ಷಣೆ ಮಾಡತಕ್ಕಂತಹ ಜವಾಬ್ದಾರಿ ತಮಗಿದೆ. ನಾನು ಅದನ್ನು ಮನಗಂಡೇ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ವಿಚಾರಗಳನ್ನು ತಿಳಿಸಿದ ಮೇಲೆ ನಿಮ್ಮ ಕಾರ್ಯಾಲಯದಿಂದ ಉತ್ತರ ಬಂದಿದೆ. ನನಗೂ ಬಂದಿದೆ. ನಾನೂ ಅದರಲ್ಲಿ ರುಜು ಮಾಡಿದ್ದೇನೆ.

MR. DEPUTY SPEAKER.--In your own interest I am saying. Do not raise that subject matter. Let me peruse that report and I permit you to raise that subject matter if it is relevant. That is why I requested Sri Swamy Rao to bring that report. Let me see.

ಶ್ರೀ ಎಸ್. ಬಂಗಾರಪ್ಪ.--ಉತ್ತರವನ್ನು ಕಳುಹಿಸುವುದಕ್ಕಿಂತ ಮೊದಲು ಸದಸ್ಯರನ್ನು ಕರೆದು ಮಾತನಾಡಿದ್ದರೆ ಸಂತೋಷ.

ಉಪಾಧ್ಯಕ್ಷರು.--ಅವರನ್ನೂ ಕರೆದು ಮಾತನಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.--ಇದು ಮಾನ್ಯ ಸ್ವಾಮಿರಾವ್‌ರವರ ವ್ಯಯಕ್ತಿಕ ಪ್ರಶ್ನೆಯಲ್ಲ. ನಾನೂ ಇದರಲ್ಲಿ ರುಜು ಮಾಡಿದ್ದೇನೆ.

MR. DEPUTY SPEAKER.—You are also one of the signatories. Sri Swamy Rao is also one of the signatories. It does not mean that I should call all the members who are signatories.

SRI S. BANGARAPPA.—Rules "do not say that".

ಉಪಾಧ್ಯಕ್ಷರು.—ಒಂದೇ ಪ್ರಶ್ನೆಯಲ್ಲಿ ೫-೬ ಜನ ಸಹಿ ಮಾಡಿದ್ದರೂ, ಅದಕ್ಕೆ ಉತ್ತರ ಬಂದರೆ ೫-೬ಜನಗಳಿಗೂ ಉತ್ತರ ಕೊಡಲಾಗಿದೆ ಅಂತ ಲೆಕ್ಕ. ಮಾನ್ಯಸ್ವಾಮಿರಾವ್‌ರವರಿಗೆ ಇದರ ಬಗ್ಗೆ ವರದಿಯನ್ನು ತರಿಸುತ್ತೇನೆ ಅಂತ ಹೇಳಿದ್ದೇನೆ. ವರದಿಯನ್ನು ತರಿಸಿ ಅಂತ ಅವರು ಒಪ್ಪಿಕೊಂಡಿರುತ್ತಾರೆ. ಅದರಂತೆ ವರದಿಯನ್ನು ತರಿಸಿ ಅವರಿಗೆ ಉತ್ತರವನ್ನು ಕಳುಹಿಸಿಕೊಟ್ಟಿದ್ದೇವೆ. ಆದ್ದರಿಂದ ಆ ವರದಿಯನ್ನು ನಾನು ಪರಿಶೀಲನೆ ಮಾಡುತ್ತೇನೆ ನನ್ನ ಕೊಠಡಿಗೆ ಬನ್ನಿ ಎಂಬುದಾಗಿ ಈಗಾಗಲೇ ಹೇಳಿದ್ದೇನೆ.

SRI S. BANGARAPPA.—Alright For the sake of arguing agreeing that such a decision was arrived at in your chambers I would like to bring to your kind notice one thing Right is given to the Member of this House. ನಮಗೆ ಇರತಕ್ಕಂತಹ ಅಧಿಕಾರವನ್ನು ಚಲಾಯಿಸತಕ್ಕಂತಹ ಕಾಲದಲ್ಲಿ ಸರ್ಕಾರದಿಂದ ವರದಿಯನ್ನು ತರಿಸಿ ನಮಗೆ ಕಳುಹಿಸುವುದು we will never be satisfied. I agree Considering the matter to be not much important matter.

ತಾವು ಹೇಳಿದುದನ್ನು ಒಪ್ಪೋಣ. ಆದರೆ ಈ ಕಡೆಯ ಸದಸ್ಯರೇ ಆಗಲಿ, ಆ ಕಡೆಯ ಸದಸ್ಯರೇ ಆಗಲಿ ಅವರ ಹಕ್ಕನ್ನು ಪೊಟಕುಗೊಳಿಸುವುದು ಬೇಡ ಸದಸ್ಯರ ಹಕ್ಕನ್ನು ಕಾಪಾಡುವುದು ತಪ್ಪು ದಾಗಿದೆ. ಆದೇರೀತಿ ನಾನು ಷಿಳಿನೇ ನಿಯಮದ ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದೇನೆ. ಆದು ಯಾವುದರ ಬಗ್ಗೆ ಎಂದರೆ ಒಬ್ಬ ಮಹಿಳೆಯ ಮಾನಭಂಗದ ಬಗ್ಗೆ. ಇದು ಸಣ್ಣ ವಿಚಾರವೇ ಹೇಳಿ ಈ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೇ ಬೇಡವೇ ಎನ್ನುವುದನ್ನು ಹೇಳಿ. ಅಲ್ಲದೆ, ಅಲ್ಲಿ ಆಸ್ಪತ್ರೆಯ ಒಬ್ಬ ಡಾಕ್ಟರ್ ಮಾಡಿದ ಅತ್ಯಾಚಾರದ ಕೆಲಸ ಇದು. ಇದನ್ನು ಯಾರು ಮುಖ್ಯ ಅಲ್ಲ ಅಂತ ಹೇಳಿದ್ದು, ನನಗಂತೂ ಅರ್ಥವಾಗುವುದಿಲ್ಲ.

ಉಪಾಧ್ಯಕ್ಷರು.—ಯಾರೂ ಕೂಡ ಇದು ಮುಖ್ಯ ಅಲ್ಲ ಅಂತ ಹೇಳಲಿಲ್ಲಪಲ್ಲಾ. ತಾವೇಕೆ ಇದನ್ನು ಈ ರೀತಿಯಾಗಿ ಅಸ್ಯೂಮ್ ಮಾಡಿಕೊಳ್ಳುತ್ತಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ತಾವೇನೋ ನನ್ನ ಛೇಂಬರ್‌ಗೆ ಬನ್ನಿ ಕೂತುಕೊಂಡು ಮಾತ ನಾಡೋಣ ಅಂತ ಹೇಳಿದಿರಿ. ಆದು ನಿಮ್ಮ ಛೇಂಬರ್‌ನಲ್ಲಿ ಕೂತುಕೊಂಡು ಮಾತನಾಡಿದರೆ ಶೋಭೆ ವಾಗುವುದಿಲ್ಲ.

MR. DEPUTY SPEAKER:—I have not stated that I will decide this matter in the chamber. What I requested Mr. Swamy Ra was, let me peruse that report. I never said that I will decide this matter in the chamber. If anything is to be decided, I will decide sitting in this Chair. I don't decide any matter in the chamber.

SRI S. RANGARAPPA:—I appreciate the hon. Chair. ಈ ಬಗ್ಗೆ ಸರ್ಕಾರದಿಂದ ಬಂದಂಥಾ ಉತ್ತರವನ್ನು ತಪ್ಪು ಗಮನಕ್ಕೆ ತರುತ್ತೇನೆ....

ಶ್ರೀ ಹೆಚ್. ಎ. ನಾರಾಯಣಗೌಡ.—ಸ್ವಾಮಿ, ಆ ಸದಸ್ಯರಿಗೆ ತಾವೇನಾದರೂ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ ?

ಉಪಾಧ್ಯಕ್ಷರು.—ಅವರಿಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಅವರು ಮಾತನಾಡುತ್ತ ಇರುವುದನ್ನು ನೋಡಿದರೆ ತಾವು ಚರ್ಚೆಗೆ ಅವಕಾ ಶ ಮಾಡಿಕೊಟ್ಟಂತೆ ಕಾಣುತ್ತದೆಯಿಲ್ಲಾ. ಈ ಬಗ್ಗೆ ಅವರಿಗೆ ಮಾತನಾಡುವುದಕ್ಕೆ ತಾವು ಅವ ಕಾಶ ಕೊಡುವುದಾದರೆ ನಮಗೂ ಅವಕಾಶ ಕೊಡಿ. ಇಲ್ಲವೇ ಅವರನ್ನು ಕಂಟಿನ್ಯೂ ಮಾಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ,.....

ಶ್ರೀ ಎಚ್. ಎ. ನಾರಾಯಣಗೌಡ.—ಮತ್ತೆ ಅವರು ಮಾತನಾಡುವುದಕ್ಕೆ ಏದ್ದು ನಿಂತರಲ್ಲಾ ಸ್ವಾಮಿ.

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ಆ ವರದಿಯನ್ನು ನಾನು ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ದಯವಿಟ್ಟು ನಾನು ಹೇಳುವುದನ್ನು ಕೇಳಿ...

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಉಪಾಧ್ಯಕ್ಷರೇ, ನಮ್ಮ ಕಡೆ ಸ್ವಾಮಿರಾವ್ ಅವರು ಮಾತ ನಾಡುತ್ತಾ ಇದ್ದರೆ ಅವರನ್ನು ಕೂರಿಸಿದಿರಿ, ಬಂಗಾರಪ್ಪನವರು ೧೦ ನಿಮಿಷಗಳಿಂದಲೂ ಸತ ಮಾತ ನಾಡುತ್ತಿದ್ದಾರೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಾದ ನಿಯಮಾವಳಿ ಇದೆಯೇ, ಇದರ ಬಗ್ಗೆ ರೂಲಿಂಗ್ ಕೊಡಿ. ಈ ವಿಷಯವನ್ನು ತಾವು ಆಷ್ಟು ಲಘವಾಗಿ ತೆಗೆದುಕೊಳ್ಳಬೇಡಿ. ಪ್ರತಿಯೊಬ್ಬ ಸದಸ್ಯನಿಗೂ ಸಮಾನವಾದ ಹಕ್ಕು, ಸಮಾನವಾದ ಆತ್ಮಗೌರವ, ಸಮಾನವಾದ ಅವಕಾಶ ಇರಬೇಕು. ಇದು ಆತ್ಮ ಗೌರವದ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಆತ್ಮ ಗೌರವಕ್ಕೆ ಕುಂದು ತರುವುದಿಲ್ಲ ನಿಯಮಾವಳಿ ಚಿಚಿಳಿರ ಪ್ರಕಾರ ಮಾತನಾಡುವುದಕ್ಕೆ ನನಗೆ ಸ್ಕೋಪ್ ಇದೆ. ನಿಮ್ಮ ಆತ್ಮ ಗೌರವದ ಬಗ್ಗೆ ನಾನೇನೂ ಕುಂದು ತರುವುದಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು. ಮತ್ತೆ ಅವರು ಮಾತನಾಡುತ್ತಿದ್ದಾರಲ್ಲಾ ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ—ಸ್ವಾಮಿ, ನಾನು ನಿಯಮ ಚಿಚಿಳಿರ ಪ್ರಕಾರ ಮಾತನಾಡುತ್ತಿದ್ದೇನೆ. ಪದೇ ಪದೇ ಆ ಕಡೆಯವರು ಎದ್ದು ಎದ್ದು ಮಾತನಾಡುತ್ತಿದ್ದಾರಲ್ಲಾ ಇದು ಸರಿಯೇ ನನಗೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಅದೇನೆಂದರೆ ಆಡಳಿತ ಪಕ್ಷಕ್ಕೂ ಮತ್ತು ವಿರೋಧಪಕ್ಷಕ್ಕೂ ಇರುವ ವ್ಯತ್ಯಾಸ ಏನು ಅನ್ನುವುದನ್ನು ನಾನು ಬೇರೆ ಹೇಳಬೇಕಾಗಿಲ್ಲ. Who said that we don't enjoy such powers ? We are enjoying it.

(*Interruption*)

MR. DEPUTY SPEAKER.—What is this ? I cannot understand. I am here to decide. Why do you worry ? This is a matter between him and the Chair. Please resume your seats.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ.....

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಕಾನೂನು ಮಂತ್ರಿಗಳು ಮಾತನಾಡುವುದಕ್ಕೆ ಮುಂಚೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ, ವಿರೋಧ ಪಕ್ಷದವರ ಸ್ಥಾನಮಾನ, ಆತ್ಮ ಗೌರವ, ಹಕ್ಕು ಆಡಳಿತ ಪಕ್ಷದವರಿಗೆ ಎಷ್ಟರಮಟ್ಟಿಗೆ ಇದೆಯೋ ನಮಗೂ ಕೂಡ ಅಷ್ಟರ ಮಟ್ಟಿಗೆ ಇದೆ. ಮಧ್ಯೆ ಏನಾದರೂ ಕೂಡ ನಮ್ಮ ಆತ್ಮ ಗೌರವಕ್ಕೆ ಕುಂದುಂಟು ಮಾಡಿದರೆ ಅದಕ್ಕೆ ತಮ್ಮ ರಕ್ಷಣೆ ಬೇಕು.

MR. DEPUTY SPEAKER.— I am the first man to protect the interest of you and every body. Don't have any doubt in your mind.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸದಸ್ಯರು ನಿಯಮಾವಳಿಯನ್ನು ನೋಡಿದರೆ ಗೊತ್ತಾಗುತ್ತದೆ. ನಿಯಮಾವಳಿ ಪ್ರಕಾರವೇ ನಾನು ಮಾತನಾಡುತ್ತಿದ್ದೇನೆ. ಹೀಗೆ ಮಾತನಾಡುವಾಗ ಮಧ್ಯೆ ಮಧ್ಯೆ ಆ ಕಡೆ ಸದಸ್ಯರುಗಳು ಅಡ್ಡಿ ಮಾಡುತ್ತಿದ್ದಾರಲ್ಲಾ ಇದಕ್ಕೆಲಾ ಒಂದು ಮಿತಿ ಇರಬೇಕು. ಆಗಾಗ್ಗೆ ಹೀಗೆ ಅಡ್ಡಿಪಡಿಸುವುದು ಸರಿಯಾದುದಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನಿಯಮಾವಳಿ ಪ್ರಕಾರ....

ಶ್ರೀ ಎಸ್. ಬಂಗಾರಪ್ಪ.— ಸ್ವಾಮಿ, ಆ ಕಡೆಯ ಸದಸ್ಯರು ಮಾತನಾಡುವಾಗ ಕೈ ಎತ್ತುತ್ತಿದ್ದಾರಲ್ಲಾ ಇದು ಸರಿಯೇ ?

ಉಪಾಧ್ಯಕ್ಷರು.—ಅಲ್ಲಿ ಯಾರು ಕೈ ಎತ್ತಲಿಲ್ಲ, ಹಾಗೆ ಕೈ ಎತ್ತುವುದಿಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಕಾನೂನು ಮಂತ್ರಿಗಳು ಇದರ ಬಗ್ಗೆ ಏನು ಹೇಳುತ್ತಾರೆ ಅದನ್ನು ಕೇಳಿ ನಂತರ ಮಾತನಾಡಲಿ. ನೀವು ಹಿರಿಯ ಸದಸ್ಯರಾಗಿದ್ದು ಅವರು ಏನು ಹೇಳಿತ್ತಾರೋ ಅದನ್ನು ಕೇಳದೆ ಈ ರೀತಿ ಮಾತನಾಡುವುದು ಸರಿಯೆ ?

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಸದಸ್ಯರು ಈ ವಿಚಾರವಾಗಿ ಏನು ಮಾತನಾಡಿದ್ದಾರೆ ಅದರ ಬಗ್ಗೆ ನಾನಂ ಹೇಳುವುದೇನೆಂದರೆ....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಕಾನೂನು ಮಂತ್ರಿಗಳು ಹೇಳುವುದಕ್ಕೆ ಮುನ್ನ ನಾನಂ ಒಂದು ವಿಷಯವನ್ನು ಹೇಳುತ್ತೇನೆ.

ಶ್ರೀ ಬಿ, ಬೈರಪ್ಪಾಜಿ.—ಸ್ವಾಮಿ, ಈ ರೀತಿ ಮಾಡಿದರೆ ಯಾರಿಗೂ ಕೂಡ ಗೌರವ ತರುವುದಿಲ್ಲ. ಸೀನಿಯರ್ ಮೆಂಬರ್ಸ್ ಏನು ಇದ್ದಾರೆ ಅಂಥಾವರಿಗೆ ಈ ರೀತಿ ಮಾಡಿದರೆ ಅದು ಯಾರಿಗೂ ಸಮ್ಮತವಾದಂದಲ್ಲ. ಹಿಂದೆಂದೂ ಕೂಡ ಈರೀತಿಯಾಗಿ ನಡೆದಿಲ್ಲ ಈಗ ತಾವು ದಯಮಾಡಿ ಎಲ್ಲಾ ಪಕ್ಷದ ಮುಖಂಡರನ್ನೂ ತಮ್ಮ ಛೇಂಬರಿಗೆ ಕರೆಸಿ ಈ ಸದನದಲ್ಲಿ ಯಾವ ರೀತಿಯಾದ ನಡವಳಿಕೆ ಇರಬೇಕು ಎನ್ನುವುದನ್ನು ತಿಳಿಸಿದರೆ ಅವರು ಸದಸ್ಯರಿಗೆ ಮನವರಿಕೆ ಮಾಡಿಕೊಡಬಹುದು. ಈಗ ನಾವೆಲ್ಲಾ ನೋಡಿದ ಹಾಗೆ ಪ್ರತಿಯೊಂದು ಹಂತದಲ್ಲೂ ಕೂಡ ಹೇಗೆ ಎದ್ದುನಿಂತುಕೊಂಡು ಮಾತನಾಡುತ್ತಾ ಹೋದರೆ, ಇದು ಇನ್ನೊಬ್ಬ ಸದಸ್ಯರ ಆಥವಾ ವಿರೋಧ ಪಕ್ಷದ ಸದಸ್ಯರ ಪಕ್ಕಿಗೆ, ಹಾಗೂ ಮಾನ್ಯ ಸದಸ್ಯರ ಗೌರವ ಘನತೆಗೆ ಕುಂದು ಬರತಕ್ಕಂಥಾ ರೀತಿಯಲ್ಲಿ ಹಾಗೂ ಅವರ ಹಕ್ಕಿಗೆ ಚ್ಯುತಿ ಬರತಕ್ಕಂಥಾ ರೀತಿಯಲ್ಲಿ, ಚುಚ್ಚು ಮಾತುಗಳನ್ನಾಡತಕ್ಕಂಥಾ ರೀತಿಯಲ್ಲಿ ಮಾತನಾಡುತ್ತಾ ಹೋದರೆ ಇದು ಯಾರಿಗೂ ಕೂಡ ಗೌರವ ತರತಕ್ಕಂಥಾದ್ದಲ್ಲ. ಹಿಂದೆ ಯಾವಾಗಲೂ ಈ ರೀತಿ ನಡೆಯುತ್ತಾ ಇರಲಿಲ್ಲ. ದಯಮಾಡಿ ತಾವು ಇದನ್ನೆಲ್ಲಾ ಗಮನಿಸಬೇಕು. ಎಲ್ಲರೂ ಕೂಡ ಈ ಮನೆಯ ಗೌರವಕ್ಕೆ ತಕ್ಕಂತೆ ಮಾತನಾಡಲಿ.

ಉಪಾಧ್ಯಕ್ಷರು. —ತಾವು ಏನು ಸಲಹೆ ಕೊಟ್ಟಿದ್ದೀರೋ ಅದನ್ನು ಈಗಾಗಲೇ ನಾನು ಗಮನಿಸಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ, ಈ ಸಭೆಯಲ್ಲಿ ಮಾನ್ಯ ಸದಸ್ಯರು ತಮ್ಮ ಅನುಮತಿಯನ್ನು ಕೋರಿ ಈ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ಅದರಲ್ಲಿ ಯಾರಿಗೂ ಕೂಡ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ. ಆದರೆ ಅದು ನಿಯಮಾವಳಿಗೆ ಒಳಪಟ್ಟ ವಿಷಯವಾಗಿದ್ದರೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅಪ್ಪಣೆ ಕೊಡುವ ಜವಾಬ್ದಾರಿ ತಾವಾಗಲೂ ತಮ್ಮ ಒಂದು ಹಕ್ಕಿಗೆ ಅದನ್ನು ಕಾದಿರಿಸಲಾಗಿದೆ.

೧ ಪಿ.ಎಂ,

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಬಂಗಾರಪ್ಪನವರು ಎತ್ತಿರತಕ್ಕ ವಿಷಯ ಬಹಳ ಗಹನವಾದುದು ಎಂದು ತಾವೂ ಹೇಳಿದ್ದೀರಿ, ನಾವೂ ಕೂಡ ಅದು ಗಹನವಾದುದು ಎಂದು ಭಾವಿಸಿದ್ದೇವೆ. ಈ ವಿಚಾರವನ್ನು ಕಾನೂನಿನ ಚೌಕಟ್ಟಿನಲ್ಲಿ ಪ್ರಸ್ತಾಪ ಮಾಡಬೇಕು ಎಂದು ಹೇಳುವುದರ ಜೊತೆಗೆ ಅದನ್ನು ಯಾವರೀತಿಯಲ್ಲಿ ಸಭೆಯಲ್ಲಿ ತೀರ್ಮಾನ ಮಾಡಿದೆ, ಅದಕ್ಕೆ ಯಾವರೀತಿಯಲ್ಲಿ ಅವಕಾಶ ಕೊಡಬೇಕು ಎನ್ನುವುದನ್ನು ನಾನು ಇಲ್ಲಿ ಹೇಳಬೇಕಾಗಿದೆ. ತಾವು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೀರಿ. ತಾವು ಇದರ ಬಗ್ಗೆ ಪರಿಶೀಲನೆ ಮಾಡುವುದಿಲ್ಲ ಎನ್ನತಕ್ಕ ತೀರ್ಮಾನವನ್ನು ನಾವು ತೆಗೆದುಕೊಂಡಿಲ್ಲ. ಆಂದಾಗ್ಯೂ ಈ ಕಾರ್ಯಕಲಾಪಗಳು ನಿಯಮಾವಳಿಗಳನ್ನು ನಾವು ಪಾಲನೆ ಮಾಡಬೇಕಾಗುತ್ತದೆ. ಈ ಒಂದು ವಿಷಯವನ್ನು ಅಲ್ಲಿಗೆ ಬಿಡೋಣ. ಮಾನ್ಯ ಮಂತ್ರಿಗಳಿಂದ ಲಕ್ಷ್ಮೀಸಾಗರ್‌ರವರು ನಿಯಮಾವಳಿಗಳ ಚೌಕಟ್ಟಿನಲ್ಲಿ ಯಾವರೀತಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿದ್ದಾರೆ, ಅದನ್ನು ನಾವೆಲ್ಲರೂ ಒಪ್ಪುತ್ತೇವೆ. ಈಗ ಇರುವ ಪ್ರಶ್ನೆ ಇಷ್ಟೆ, ಮಾನ್ಯ ಬಂಗಾರಪ್ಪನವರು ಏನು ವಿಷಯವನ್ನು ಎತ್ತಿದ್ದಾರೆ ಅದನ್ನು ಇಲ್ಲಿ ಅವರು ಎತ್ತುವುದಕ್ಕೆ ಏಕೆ ಪ್ರಸಂಗ ಬಂತು ? ಅಂದರೆ ಮಾನ್ಯ ಸದಸ್ಯರಾದ ಸ್ವಾಮಿಯವರಿಗೆ ಒಂದು ಉತ್ತರ ಬಂದಿದೆ. ಇದು Closed Chapter as far as the members are concerned. ಆದರೆ ಇಲ್ಲಿ ಅದನ್ನು ಮುಚ್ಚತಕ್ಕ ಕೆಲಸವನ್ನು ಮಾಡತಕ್ಕ ವಿಚಾರವಲ್ಲ. ಇದು ಬಹಳ ಗಂಭೀರವಾದ ವಿಷಯಂ, ಈ ಸದನ ನಾಳೆಯ ದಿವಸ ಮುಗಿಯುತ್ತದೆ. ಕೆಲವು ಕಾಲದ ನಂತರ ಈ ವಿಷಯದ ಗಂಭೀರತೆ ಹೊರಟು ಹೋಗುತ್ತದೆ. ಇದು ತಮ್ಮ ತಪ್ಪು ಅಲ್ಲ, ಈ ಸದನದ ತಪ್ಪು ಅಲ್ಲ, ಆದರೆ ಸಭೆಯಲ್ಲಿ

ಒಮ್ಮೊಮ್ಮೆ ಟೆನ್‌ಷನ್ ಡೆವಲಪ್ ಆಗುತ್ತದೆ. ಕೆಲವು ಸಂದರ್ಭದಲ್ಲಿ ಗಂಭೀರವಾಗಿರತಕ್ಕ ವಿಷಯಗಳು ಬಂದಾಗ ಅದನ್ನು ಅಪೀಲು ಮಾಡತಕ್ಕ ಪರಿಪಾಠ ಈ ಸದನದಲ್ಲಿದೆ. ಮತ್ತೊಂದು ಪರಿಪಾಠ ಎಂದರೆ, ಈ ರೀತಿಯಾಗಿ ಎದ್ದು ನಿಂತು ಒಬ್ಬ ಸದಸ್ಯರು ಹೇಳುವಾಗ, ಇಲ್ಲಿ ಇಬ್ಬರು ಅಥವಾ ಮೂರು ಜನ ಸದಸ್ಯರು ಅದಕ್ಕೆ ಆತಂಕ ಮಾಡುವುದು. ನಾವು ಈ ಸಭೆಯಲ್ಲಿ ೧೯೭೨ನೇಯಿಂದ ಇಸವಿಯಿಂದಲೂ ಕೆಲಸ ಮಾಡಿಕೊಂಡು ಬಂದಿದ್ದೇವೆ. ಈ ರೀತಿಯಾಗಿ ಸಭೆಯಲ್ಲಿ ಎರಡು ಮೂರು ಜನ ಸದಸ್ಯರು ಎದ್ದು ನಿಂತು ಒಬ್ಬ ಸದಸ್ಯರು ಹೇಳತಕ್ಕ ವಿಷಯಕ್ಕೆ ಆತಂಕ ಮಾಡುವ ಪ್ರವೃತ್ತಿ ಬೆಳೆದರೆ ಅದು ಒಳ್ಳೆಯದಲ್ಲ. ತಮಗೆ ನಿಯಮಾವಳಿಗಳನ್ನು ಪಾಲನೆ ಮಾಡಬೇಕು ಎನ್ನುವುದು ಮನಸ್ಸಿನಲ್ಲಿರ ಬಹುದು, ಪ್ರಾಮಾಣಿಕ ಪ್ರಯತ್ನ ಕೂಡ ಇದರಲ್ಲಿ ಇರಬಹುದು. ಆದ್ದರಿಂದ ಸಂಬಂಧಪಟ್ಟ ಸದಸ್ಯರು ತಮ್ಮನ್ನು ಕನ್‌ವಿನ್ಸ್ ಮಾಡಲಿಕ್ಕೆ ಒಂದು ಆಧಾರದ ಮೇಲೆ ತಮಗೆ ಪತ್ರವನ್ನು ಕೊಟ್ಟಿದ್ದಾರೆ. ಇಂಥಾ ಒಂದು ಸಮಯದಲ್ಲಿಯೂ ಸಹ ಅನೇಕ ಜನ ಸದಸ್ಯರು ಇದಕ್ಕೆ ಆತಂಕ ಮಾಡುವುದು ನಡೆಯುತ್ತಿದೆ. ಇದು ಆದಾಗ ಸಭೆಯಲ್ಲಿ ಒಂದು ಕಡೆ ಟೆನ್‌ಷನ್ ಡೆವಲಪ್ ಆಗುತ್ತದೆ, ಮತ್ತೊಂದು ಕಡೆ ಸಂಘರ್ಷಣೆಗಳು ಪ್ರಾರಂಭವಾಗುತ್ತವೆ. ಆದ್ದರಿಂದ ನಾವು ವಿಷಯವನ್ನು ಅವರಿಗೆ ಬಿಡಬೇಕು. ಈ ವಿಷಯವನ್ನು ಸರಿಯಾದ ಕ್ರಮದಲ್ಲಿ ಕೊಂಡೊಹೋಗುವುದಕ್ಕೆ ತಾವು ಇದ್ದೀರಿ ಈ ಸದನದಲ್ಲಿ ನಾವು ತಮಗೆ ಸಲಹೆ ಮಾಡಬಹುದು, ಸಲಹೆ ಮಾಡುವ ದೃಷ್ಟಿಯಿಂದ ಕಾರ್ಯಕಲಾಪಗಳ ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳದೆ ನಮ್ಮ ಅಭಿಪ್ರಾಯವನ್ನು ಕೊಡಬಹುದು. ಹೀಗೆ ಮಾಡುವಾಗಲೂ ಕೂಡ ಆತಂಕ ಬರಬಾರದು. ಇದರಿಂದ ವಿಷಯದ ಗಂಭೀರತೆ ಹೊರಟು ಹೋಗುವುದಲ್ಲದೆ ಸಭೆಯ ಸಮಯವೂ ಹೋಗುತ್ತದೆ ಮತ್ತು ಪ್ರಶ್ನೆಯೂ ಸಹ ಇತ್ಯರ್ಥವಾಗುವುದಿಲ್ಲ. ಇಂಥಾ ಪ್ರಸಂಗಗಳು ನಡೆದಾಗ ತಾವು ಸಭೆಯ ಸತ್ಸಂಪ್ರದಾಯ ಮತ್ತು ಪರಂಪರೆಗಳ ಹಿತದೃಷ್ಟಿಯಿಂದ ಸದಸ್ಯರುಗಳಿಗೆ ಸಮಜಾಯಿಷಿ ಕೊಡಲಿಕ್ಕೆ ಕೂಡ ತಯಾರಿದ್ದೀರಿ. ಆದರೆ ವಿಷಯದ ಗಂಭೀರತೆ ಹೋಗುತ್ತದೆ ರಾಜಕೀಯ ಸಂಘರ್ಷಣೆ ಮತ್ತು ವೈಯಕ್ತಿಕ ಸಂಘರ್ಷಣೆ ಆಗಲಿಕ್ಕೆ ಪ್ರಾರಂಭವಾಗುತ್ತದೆ. ಇದರಿಂದ ವಿಷಯಕ್ಕೆ ನ್ಯಾಯವಾಗಿ ಏನು ಪರಿಹಾರ ದೊರಕಬೇಕೋ ಅದಕ್ಕೆ ಇಬ್ಬರೂ ಸಹಾಯ ಮಾಡಿದಂತಾಗುವುದಿಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

MR. DEPUTY SPEAKER.—Now, keeping in view the importance of the subject matter I will take a decision because rule 334 is very clear. The last portion of the rule 334 is very clear.

> "3 4. A member who wishes to bring to the notice of the house any matter which is not a point of order shall give notice to the Secretary in writing stating briefly the point which he wishes to raise in the House together with reasons for wishing to raise it and he shall be permitted to raise it only after the Speaker has given consent and at such time and date as the Speaker may fix

Keeping in view the last portion of this rule I request Sri Swami Rao to contact me in my chamber, Let me see the report and take a decision with regard to the last portion of the rule. Therefore, you need not have doubt in your mind that the Chair has take decision with regard to this. I have not taken any decision. Now please allow me to conduct further proceedings.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ ನಮ್ಮ ಮನಸ್ಸಿನಲ್ಲಿಯೂ ಕೂಡ ಏನೂ ಉಳಿಯಬಾರದು. ತಾವು ಏನು ಹೇಳಿದ್ದೀರಿ ಅದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಇದರ ಬಗ್ಗೆ

ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ಅಭಿಪ್ರಾಯವೇನೆಂದರೆ, ನಾಳೆಯ ದಿವಸ ಕೊನೆಯ ದಿವಸವಾಗುವುದರಿಂದ, ಅಲ್ಲಿಯವರಿಗೆ ಕಾದು ವಿಚಾರವನ್ನು ಪ್ರಸ್ತಾಪ ಮಾಡದಿದ್ದರೆ ಹೇಗೆ ?

MR. DEPUTY SPEAKER.—Keeping in view that the Assembly Sessions will be closed on 31st I will take a decision.

ಶ್ರೀ ಎಸ್. ಬಂಗಾರಪ್ಪ.—ಹಾಗೆಯೇ ಬೇರೆ ವಿಚಾರಗಳು ಇಲ್ಲಿ ಹೇಳಬೇಕಾದವು ಇವೆ. ಅವು ತಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಬರುತ್ತಾ ಇಲ್ಲ.

ಉಪಾಧ್ಯಕ್ಷರು.—ಅದನ್ನು ಪರಿಶೀಲನೆ ಮಾಡುತ್ತೇನೆ.

CALLING ATTENTION TO MATTER OF URGENT PUBLIC IMPORTANCE

Re : Relay of T. V. Programmes in Bangalore)

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅಧ್ಯಕ್ಷರೆ, ಮಾನ್ಯ ವಾರ್ತಾ, ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳ ಗಮನವನ್ನು, ಬೆಂಗಳೂರಿನಿಂದ ಪ್ರಚಾರವಾಗುತ್ತಿರುವ ಟಿ.ವಿ. ಕಾರ್ಯಕ್ರಮಗಳ ಬಗ್ಗೆ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವಾರ್ತಾ, ಪ್ರಚಾರ ಹಾಗೂ ಪ್ರವಾಸೋದ್ಯಮ ಸಚಿವರು).—ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಈಗ ಬೆಂಗಳೂರಿನಲ್ಲಿ ದಿನಾಂಕ ೧-೧೧-೧೯೮೫ರಲ್ಲಿ ಪ್ರಾರಂಭವಾದ ದೂರದರ್ಶನ ಮರು ಪ್ರದರ್ಶನ ಕೇಂದ್ರ ಮಾತ್ರ ಇದೆ. ವಾರದಲ್ಲಿ ನಾಲ್ಕು ದಿನ ಅಂದರೆ ಸೋಮವಾರ, ಮಂಗಳವಾರ, ಬುಧವಾರ ಮತ್ತು ಗುರುವಾರಗಳಂದು ಮದರಾಸು ದೂರದರ್ಶನ ಕೇಂದ್ರದಿಂದಲೂ ಹಾಗೂ ಇನ್ನುಳಿದ ಮೂರು ದಿನ ಅಂದರೆ ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ಮುಂಬಯಿ ದೂರದರ್ಶನ ಕೇಂದ್ರದಿಂದ ಪ್ರಸಾರವಾಗುವ ರಾಷ್ಟ್ರೀಯ ಕಾರ್ಯಕ್ರಮವನ್ನು ಸೇರಿದಂತೆ ಕೇವಲ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಗುತ್ತಿದೆ.

ಈ ಕೇಂದ್ರದಿಂದ ಪ್ರದರ್ಶಿಲ್ಪಡುವ ಕನ್ನಡ ಕಾರ್ಯಕ್ರಮಗಳನ್ನು ಬಹಳ ಜನರು ನೋಡಿ. ದಿನಾಂಕ ೧-೧೧-೧೯೮೫ ರಿಂದ ೩೧-೧೨-೧೯೮೫ ರೊಳಗೆ ಪ್ರದರ್ಶಿಸಲ್ಪಟ್ಟ ಕನ್ನಡ ಕಾರ್ಯಕ್ರಮದ ಒಟ್ಟು ಅವಧಿ ಕೇವಲ ಆರು ಘಂಟೆ ಮೂವತ್ತು ನಿಮಿಷಗಳು. ಈ ವರ್ಷದ ಪ್ರಾರಂಭದಿಂದ ಇಲ್ಲಿಯವರೆವಿಗೆ ೧೨ ಘಂಟೆಗಳಿಗಿಂತ ಕಮ್ಮಿ ಅವಧಿಯಂತೆ ಕನ್ನಡ ಕಾರ್ಯಕ್ರಮಗಳು ಪ್ರದರ್ಶಿಸಲ್ಪಟ್ಟಿವೆ. ಈ ಕಾರಣದಿಂದಾಗಿ ಆದಷ್ಟು ಬೇಗ ಹೊರಾಂಗಣ ಪ್ರಸಾರ ವಾಹನವನ್ನು ನೀಡಬೇಕೆಂದು ಒತ್ತಾಯಿಸುತ್ತಿದ್ದೇವೆ. ಈ ವಾಹನ ಬಂದಾಗ ಸ್ಥಳೀಯ ಪ್ರತಿಭಾವಂತರಿಂದ ಹೆಚ್ಚು ಹೆಚ್ಚು ಕನ್ನಡ ಕಾರ್ಯಕ್ರಮ ಒದಗಿಸಲು ಸಾಧ್ಯವಾಗುತ್ತದೆ. ಈ ವಿಷಯದಲ್ಲಿ ನಾನು ಕೇಂದ್ರ ಸರಕಾರದೊಂದಿಗೆ ವ್ಯವಹರಿಸುತ್ತಿದ್ದೇನೆ. ದಿನಾಂಕ ೨೧-೨-೧೯೮೬ ರಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರಿಗೆ ಪತ್ರವೊಂದನ್ನು ಬರೆದಿದ್ದೇನೆ. ದಿನಾಂಕ ೨೨-೨-೧೯೮೬ ರಂದು ಕರ್ನಾಟಕದ ಎಲ್ಲ ಸಂಸತ್ ಸದಸ್ಯರಿಗೂ ಪತ್ರ ಬರೆದು ಆದಷ್ಟು ಬೇಗ ಕರ್ನಾಟಕಕ್ಕೆ ಹೊರಾಂಗಣ ದೂರದರ್ಶನ ವಾಹನ ಒದಗಿಸಲು ಕೇಂದ್ರ ಸರಕಾರವನ್ನು ಒತ್ತಾಯಿಸುವಂತೆ ತಿಳಿಸಿದ್ದೇನೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರೊಡನೆ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹೇಳಿದ್ದೇವೆಂದು ಕರ್ನಾಟಕದ ಕೆಲವು ಸಂಸತ್ ಸದಸ್ಯರು ಉತ್ತರಿಸಿದ್ದಾರೆ. ನಾನು ಕಳೆದ ಸಾರಿ ದೆಹಲಿಗೆ ಭೇಟಿ ನೀಡಿದ್ದಾಗ ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿ ಶ್ರೀ ಹೆಚ್.ಕೆ. ಎಲ್. ಭಗತ್, ಕರ್ನಾಟಕದ ಕೇಂದ್ರ ಸಚಿವರುಗಳಾದ ಶ್ರೀ ವೀರೇಂದ್ರ ಪಾಟೀಲ್, ಶ್ರೀ ಶಂಕರಾನಂದ ಶ್ರೀ ಎಸ್ ಎಂ. ಕೃಷ್ಣ, ಶ್ರೀ ಜಾಫರ್ ಶರೀಫ್, ಶ್ರೀ ಜನಾರ್ಧನ ಪೂಜಾರಿ ಹಾಗೂ ಕರ್ನಾಟಕದ ಸಂಸತ್ ಸದಸ್ಯರೊಂದಿಗೆ ಕರ್ನಾಟಕಕ್ಕೆ ಹೊರಾಂಗಣ ಪ್ರಸಾರ ವಾಹನ ಒದಗಿಸುವ ಬಗ್ಗೆ ಮಾತನಾಡಿದ್ದೇನೆ. ಕರ್ನಾಟಕಕ್ಕೆ ಹೊರಾಂಗಣ ಪ್ರಸಾರ ವಾಹನ ದೊರೆಯುವವರೆಗೆ ನನ್ನ ಪ್ರಯತ್ನ ಮುಂದುವರಿಸುತ್ತೇನೆ.